



ಧರ್ಮಗುರು ಟೋನಿ ಅಲಾಮೊ | ಅಲಾಮೊ ಕ್ರೈಸ್ತ ರಾಷ್ಟ್ರ | ಸಂಪುಟ 16100



ಪ್ಯಾಸ್ಟರ್ ಅಲಾಮೊ

# ಮೃಗದ ಗುರುತನ್ನು ಎಂದೂ ತೆಗೆದುಕೊಳ್ಳಬೇಡಿ ಇಲ್ಲವಾದರೆ ನೀವು ಶಾಶ್ವತವಾಗಿ ಪಶ್ಚಾತ್ತಾಪ ಪಡುವಿರಿ

ಟೋನಿ ಅಲಾಮೊ ಅವರಿಂದ

ಮತ್ತಾಯದ 24ನೇ ಅಧ್ಯಾಯದಲ್ಲಿ, ಜಗತ್ತಿನ ಅಂತ್ಯ ಯಾವಾಗ ಸಂಭವಿಸುತ್ತದೆ ಮತ್ತು ಆತ ಭೂಮಿಗೆ ಹಿಂದಿರುಗುವುದರ ಸೂಚನೆ ಏನಾಗಿರುತ್ತದೆ ಎಂದು ಯೇಸುವಿನ ಶಿಷ್ಯರು ಆತನನ್ನು ಕೇಳಿದರು (ಮತ್ತಾಯ 24:3). ಆತ ಭೂಮಿಗೆ ಹಿಂದಿರುಗುವುದರ ಅತ್ಯಂತ ಮುಖ್ಯ ಆದೇಶ ಮತ್ತು ಸೂಚನೆ ಎಂದರೆ ಸುಳ್ಳು ಪ್ರವಾದಿಗಳ ಬಗ್ಗೆ ಮತ್ತು ಸುಳ್ಳು ಹೇಳುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಈ ಸೂಚನೆ ಎಷ್ಟು ಮುಖ್ಯ ಎಂದರೆ ಯೇಸು ಎಲ್ಲಾ ಸೂಚನೆಗಳ ಪೈಕಿ ಇದನ್ನು ಮೊದಲು ಹೇಳಿದರು (ಮತ್ತಾಯ 24:4). "ಯೇಸು ಅವರಿಗೆ ಉತ್ತರವಾಗಿ ಹೇಳಿದ್ದೇನೆಂದರೆ - ಯಾರಾದರೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ. ಯಾಕೆಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು - ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು" (ಮತ್ತಾಯ 24:4-5).

ಕ್ರಿಸ್ತವಿರೋಧಿಯು ತಾನು ಕ್ರಿಸ್ತನೆಂದು ಹೇಳಿ ಅನೇಕರನ್ನು ಮೋಸಗೊಳಿಸುವನು.[1] ಮತ್ತಾಯ ಅಧ್ಯಾಯ 24 ಒಂದರಲ್ಲೇ ಯೇಸು ಇದರ ಬಗ್ಗೆ ಐದು ಬಾರಿ ಎಚ್ಚರಿಕೆ ನೀಡುತ್ತಾರೆ, ಏಕೆಂದರೆ ಸೈತಾನನು ಎಂಥ ಮೋಸಗಾರನು ಎಂದರೆ ಅವನು ಸಂಪೂರ್ಣ ಜಗತ್ತನ್ನು ಮೋಸಗೊಳಿಸುತ್ತಾನೆ.[2] ನಂತರ ಯೇಸು ಯುದ್ಧಗಳ ಬಗ್ಗೆ ಮತ್ತು ಯುದ್ಧಗಳ ವದಂತಿಗಳ ಬಗ್ಗೆ, ದೇಶಗಳು ದೇಶಗಳ ವಿರುದ್ಧ ಮತ್ತು ರಾಜ್ಯಗಳು ರಾಜ್ಯಗಳ ವಿರುದ್ಧ ಏಳುವ ಬಗ್ಗೆ, ಬರಗಳ ಬಗ್ಗೆ, ಮಾರಕಬೇನೆಗಳ ಬಗ್ಗೆ, ಮತ್ತು ಎಲ್ಲೆಲ್ಲೂ ಬರುವ ಭೂಕಂಪಗಳ ಬಗ್ಗೆ ಹೇಳಿರುವರು (ಮತ್ತಾಯ 24:6-8).

"ಆಗ ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ [ಮರುಹುಟ್ಟಿದ ಕ್ರೈಸ್ತಮತೀಯರನ್ನು ಕೊಂದು ಅವರು ದೇವರ ಸೇವೆ ಮಾಡುತ್ತಿದ್ದಾರೆಂದು ಹೇಳಿಕೊಳ್ಳುವುದು[4]] ಕೊಲ್ಲುವರು [ನಾಲ್ಕನೆಯ ಮತ್ತು ಕೊನೆಯ ದುಷ್ಟ ವಿಶ್ವ ಶಕ್ತಿಯಿಂದ[3] ]; ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆ ಮಾಡುವರು. [ಯೇಸುವಿನ ಹೆಸರು ದೇವರ ಪದ[5] - ಮತ್ತು ಆತನ ಪದವನ್ನು ಉಪದೇಶಿಸುವುದಕ್ಕಾಗಿ ನಿಮ್ಮನ್ನು ದ್ವೇಷಿಸಲಾಗುತ್ತದೆ.] ಆಗ [ತೀವ್ರ ಹಿಂಸೆಗೀಡಾಗುವ ಕಾರಣ] ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡಿದುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು" (ಮತ್ತಾಯ 24:9-10).

"ಬಹುಮಂದಿ ಸುಳ್ಳು ಪ್ರವಾದಿಗಳು ಸಹ ಎದ್ದು ಅನೇಕರನ್ನು ಮೋಸಗೊಳಿಸುವರು" (ಮತ್ತಾಯ 24:11). ಯೇಸು, ಎರಡನೇ ಬಾರಿ, ಸುಳ್ಳು ಪ್ರವಾದಿಗಳ ಬಗ್ಗೆ ಎಚ್ಚರಿಕೆ ನೀಡುತ್ತಿದ್ದಾರೆ. ಸಂಪೂರ್ಣ ಲೋಕದಲ್ಲಿ ಎಷ್ಟು ಹೆಚ್ಚು ಪಾಪ ಇರುತ್ತದೆ ಎಂದರೆ "ಬಹುಜನರ ಪ್ರೀತಿಯು ತಣ್ಣಗಾಗಿ ಹೋಗುವದು" ಎಂದು ಶ್ಲೋಕ 12 ಹೇಳುತ್ತದೆ. ಶ್ಲೋಕ 13ರಲ್ಲಿ, ಕಡೇವರೆಗೆ ತಾಳುವವರನ್ನು ರಕ್ಷಿಸಲಾಗುವುದು ಎಂದು ಯೇಸು ನಮಗೆ ಭರವಸೆ ನೀಡುತ್ತಾರೆ. ಆದರೆ ರಕ್ಷಿಸಲ್ಪಡುವ ಅನೇಕರು ತಾಳುವುದಿಲ್ಲ, ಆದ್ದರಿಂದ ಅವರನ್ನು ರಕ್ಷಿಸಲಾಗುವುದಿಲ್ಲ.[6] ಅವರು ಬಿದ್ದು ಹೋಗುವರು. "ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯ-

*(ಪುಟ 2ರಲ್ಲಿ ಮುಂದುವರಿದಿದೆ)*

---

**1** ದಾನಿಯೇಲನು 11:21-45, 2 ಥೆಸಲೋನಿಕದವರಿಗೆ 2:3-4, ಪ್ರಕಟನೆ ಅಧ್ಯಾಯ 13 **2** ಆದಿಕಾಂಡ 3:1-6, ಮತ್ತಾಯ 24:4-5, 11, 23-27, ಯೊಹಾನನು 8:44, 2 ಕೊರಿಂಥದವರಿಗೆ 11:13-15, 2 ಥೆಸಲೋನಿಕದವರಿಗೆ 2:3-12, ಪ್ರಕಟನೆ 2:9, 12:9, ಅಧ್ಯಾಯ 13, 16:13-14, 17:8, 18:23, 19:19-21, 20:1-3, 7-8 **3** ದಾನಿಯೇಲನು 2:40, 7:19-25, 8:16-26, ಪ್ರಕಟನೆ 13:1-8, ಅಧ್ಯಾಯ 17 **4** ಯೊಹಾನನು 16:2 **5** ಯೊಹಾನನು 1:1, 14, ಪ್ರಕಟನೆ 19:13 **6** ಯೆಹೆಜ್ಕೇಲನು 33:12-13, ಮತ್ತಾಯ 5:13, 12:43-45, 24:45-51, ಲೂಕ 9:62, ಯೊಹಾನ 15:6, ರೋಮಾಪುರದವರಿಗೆ 11:22, ಕೊಲೊಸ್ಸೆಯವರಿಗೆ 1:21-23, 2 ಥೆಸಲೋನಿಕದವರಿಗೆ 2:3, 1 ತಿಮೊಥೆಯನಿಗೆ 1:19, 2 ತಿಮೊಥೆಯನಿಗೆ 2:12, ಇಬ್ರಿಯರಿಗೆ 3:6-19,4:1-11, 6:4-8, 10:25-31, 38-39, 2 ಪೇತ್ರನು 2:20-22, 1 ಯೊಹಾನ 3:6-10, 2 ಯೊಹಾನ 9, ಯೂದನು 5-6, ಪ್ರಕಟನೆ 2:4-5, 3:2-3

**ಮೃಗದ ಗುರುತನ್ನು ಎಂದೂ ತೆಗೆದುಕೊಳ್ಳಬೇಡಿ ಇಲ್ಲವಾದರೆ ನೀವು ಶಾಶ್ವತವಾಗಿ ಪಶ್ಚಾತ್ತಾಪ ಪಡುವಿರಿ**

*(ಪುಟ 1 ರಿಂದ ಮುಂದುವರಿದಿದೆ)*

ನ್ನು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು. ಆದುದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ [ಇದರರ್ಥ ಪ್ರಭುವಿನ ಆಜ್ಞೆಗಳನ್ನು ಅನುಸರಿಸುತ್ತ ಆತ್ಮದಲ್ಲಿರುವುದು[7]]" (ಮತ್ತಾಯ 24:14:15).

"ಅಂಥ ಸಂಕಟವು ಲೋಕ ಹುಟ್ಟಿದಾಗಿನಿಂದ ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವದಿಲ್ಲ. ಆ ದಿನಗಳನ್ನು ಕಡಿಮೆ ಮಾಡದಿದ್ದರೆ ಒಂದು ನರಪ್ರಾಣಿಯೂ ಉಳಿಯದು; ಆದರೆ ತಾನು ಆಯ್ದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆ ಮಾಡುವನು. ಆಗ ಯಾರಾದರೂ ನಿಮಗೆ - ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿರಿ" (ಮತ್ತಾಯ 24:21-23).

ಪುನಃ, ಯೇಸು ಸುಳ್ಳು ಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳ ಬಗ್ಗೆ ಹೇಳುತ್ತಾರೆ. ಏಕೆಂದರೆ ನೀವು ಅವರನ್ನು ನಂಬಿದರೆ, ನೀವು ನಿರಂತರತೆಯನ್ನು ನರಕದಲ್ಲಿ ಬೆಂಕಿಯ ಕೆರೆಯಲ್ಲಿ ಕಳೆಯುವಿರಿ.[8] ಈ ಪೈಶಾಚಿಕ ಸುಳ್ಳು ಸರ್ಕಾರದ ಜಾತ್ಯಾತೀತ ಪ್ರವಾದಿಗಳು, ನೀವು ಮೃಗದ ಗುರುತನ್ನು ತೆಗೆದುಕೊಂಡರೆ, ನೀಮಗೆ ದೀರ್ಘ ಕಾಲದ ಜೈಲು ಶಿಕ್ಷೆಗಳಿದ್ದರೂ, ನಿಮ್ಮನ್ನು ಜೈಲಿನಿಂದ ಬಿಡುಗಡೆಗೊಳಿಸುತ್ತಾರೆ ಎಂದು ಹೇಳುತ್ತಾರೆ. ಅವರು ನಿಮಗೆ ಸರ್ಕಾರಿ ನೌಕರಿ ಕೊಡುತ್ತಾರೆ, ಇದರಿಂದ ನೀವು ಹಲವಾರು ತೆರಿಗೆಗಳಿಂದ ಮುಕ್ತರಾಗುವಿರಿ. ನಿಮಗೆ ಆಹಾರ ಸಿಗುವುದಕ್ಕೆ ಅಥವಾ ಪಾವತಿಗಳನ್ನು ಮಾಡುವುದಕ್ಕೆ ತೊಂದರೆಯಾಗುವುದಿಲ್ಲ - ಮೃಗಕ್ಕೆ ನಮಸ್ಕಾರ ಮಾಡಿ, ಅಷ್ಟೆ (ವಿಶ್ವ ಸರ್ಕಾರ ಅಧಿಕಾರದಲ್ಲಿದೆ). ಅವನ ಗುರುತು ತೆಗೆದುಕೊಳ್ಳಿರಿ, ನಿಮಗೆ ಹಾನಿಯಾಗುವುದಿಲ್ಲ. ನಿಮಗೆ ಖರೀದಿಸಲು ಮತ್ತು ಮಾರಾಟ ಮಾಡಲು ಸಾಧ್ಯವಾಗುತ್ತದೆ; ಆದರೆ ನೆನಪಿಡಿ, ನೀವು ಗುರುತನ್ನು ತೆಗೆದುಕೊಂಡರೆ, ನೀವು ಪವಿತ್ರಾತ್ಮನನ್ನು ನಿಂದನೆ ಮಾಡಿರುತ್ತೀರಿ, ಮತ್ತು ಈ ಘೋರ ಪಾಪಕ್ಕೆ ಎಂದೂ ಕ್ಷಮೆ ಇರುವುದಿಲ್ಲ.[9]

"ಆದಕಾರಣ ಯಾರಾದರೂ ನಿಮಗೆ - ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟುಹೋಗಬೇಡಿರಿ; ಇಗೋ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ" (ಮತ್ತಾಯ 24:26). ಇಲ್ಲಿ ಪುನಃ ಯೇಸು ನಮಗೆಲ್ಲರಿಗೂ ಸುಳ್ಳು ಪ್ರವಾದಿಗಳ ಕುರಿತಾಗಿ ಎಚ್ಚರಿಕೆ ನೀಡುತ್ತಿದ್ದಾರೆ. ಮನುಷ್ಯರು ಮಾಡುವ ಪವಾಡಗಳ ಕಾರಣ, ಅವರು ಆಯ್ಕೆಯಾದವರನ್ನು ಮೋಸಗೊಳಿಸುತ್ತಾರೆ.[10] ಅದು ನಿಜವಾಗಿ ಆತನೇ ಎಂದು ನಾವು ಹೇಗೆ ತಿಳಿದುಕೊಳ್ಳಬಹುದು ಎಂಬುದರ ಬಗ್ಗೆ ಯೇಸು ನಮಗೆ ಹೇಳುತ್ತಾರೆ: "ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು" (ಮತ್ತಾಯ 24:27). "ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು. [ಹದ್ದು ಒಂದು ಸ್ಕ್ಯಾವೆಂಜರ್, ರಣಹದ್ದಿನಂತೆ. ಸುಳ್ಳು ಪ್ರಚಾರದಿಂದಾಗಿ ಒಂದು ಚರ್ಚ್ ನಾಶವಾದಾಗಲೆಲ್ಲಾ, ಸೈತಾನನು ಅಲ್ಲಿರುತ್ತಾನೆ. ಸೈತಾನನು ಹಾಗೆ ಮಾಡುತ್ತಾನೆ, ಮತ್ತು ಚರ್ಚ್‌ನ ಜನರು ಅದನ್ನು ನಂಬುತ್ತಾರೆ.]

7 ಯೆಹೆಜ್ಕೇಲನು 11:19-20, 36:26-27, ಯೋಹಾನ 3:4, ರೋಮಾಪುರದವರಿಗೆ 8:1-14, ಗಲಾತ್ಯದವರಿಗೆ 5:16-18, 25 8 2 ಪೇತ್ರನು 2:1-3, 1 ಯೋಹಾನ 4:1, ಪ್ರಕಟನೆ 19:20, 20:10-15, 21:8 9 ಮತ್ತಾಯ 12:31-32, ಪ್ರಕಟನೆ 14:9-11, 20:4 10 ಮಾರ್ಕ 13:22, 2 ಥೆಸಲೋನಿಕದವರಿಗೆ 2:8-10, ಪ್ರಕಟನೆ 13:11-15, 16:12-14, 19:20

# ಪ್ಯಾಸ್ಟರ್ ಅಲಾಮೊ ಅವರಿಗೆ ಪತ್ರಗಳು

## ನ್ಯೂಯಾರ್ಕ್

ಪ್ರೀತಿಯ ವಿಶ್ವ ಪ್ಯಾಸ್ಟರ್ ಅಲಾಮೊ,

ನಿಮ್ಮ ವಿಶ್ವ ಸುದ್ದಿಪತ್ರಿಕೆಯ ಪ್ರತಿ ಒಂದು ನನಗೆ ಸಿಕ್ಕಿತು ಮತ್ತು ನಾನು ಆದರ ಮೋಡಿಗೊಳಗಾದೆ. ದೊಡ್ಡ ದಪ್ಪಕ್ಷರಗಳಲ್ಲಿದ್ದ "ಹುಚ್ಚ" ಪದ ನನ್ನ ಕಣ್ಸೆಳೆಯಿತು. ಹಿಟ್ಲರ್, ಒಬಾಮಾ ಮತ್ತು ಪೋಪ್ ಅವರ ಚಿತ್ರಗಳು ನಿಜವಾಗಿಯೂ ಸರಿಯಾಗಿದ್ದವು!! ಈ ರಕ್ತ ಪಿಶಾಚಿಗಳು ಅಸಹಾಯಕ ಮತ್ತು ತಿಳಿವಿಲ್ಲದ ಜನರಿಂದ ರಕ್ತ ಹೀರುವುದು ನನಗೆ ಕಾಣಿಸುತ್ತದೆ. ಅವರು ನಮ್ಮ ದೇವರನ್ನು ಮತ್ತು ಆತ ಮಾಡಿರುವ ಒಳ್ಳೆಯ ಕೆಲಸವನ್ನು ಮರೆತುಹೋಗಿದ್ದಾರೆ ಮತ್ತು ಅವರು ಇದಕ್ಕಾಗಿ ಶಿಕ್ಷೆ ಅನುಭವಿಸುತ್ತಾರೆ!!!

ಇಂಥ ಜನರು ನನಗೆ ಹೊಸಬರೇನಲ್ಲ; ನಿಜ ಹೇಳಬೇಕೆಂದರೆ, ಈ ಕಳೆದುಹೋದ ಆತ್ಮಗಳ ಜೊತೆ ನಾನು ಕೆಲಸ ಮಾಡುತ್ತೇನೆ ಮತ್ತು ಇವರು ಕಂಡುಕೊಳ್ಳಲ್ಪಡುವುದಕ್ಕಾಗಿ ಕಾಯುತ್ತಿದ್ದಾರೆ ಎಂದು ನನಗನಿಸುತ್ತದೆ.

ನಿಮ್ಮ ಸುದ್ದಿಪತ್ರಿಕೆಗಳಲ್ಲಿ ಒಂದನ್ನು ಓದಿದ ನಂತರ, ನಮ್ಮಲ್ಲಿ ಅನೇಕರ ಒಳಗಿರುವ ಅನುಭವಗಳಿಗೆ ಕಿಚ್ಚಿಟ್ಟು ವಿಮುಕ್ತಗೊಳಿಸಲು ನೀವೇ ಆಯ್ಕೆಯಾದವರು ಎಂಬುದು ನನ್ನ ಅನಿಸಿಕೆ.

ನಿಮ್ಮ ಸುದ್ದಿಪತ್ರಿಕೆಗಳ ಅಂಚೆಪಟ್ಟಿಯಲ್ಲಿ ನನ್ನನ್ನು ಸೇರಿಸಬೇಕೆಂದು ನಾನು ಗೌರವದಿಂದ ಕೇಳಿಕೊಳ್ಳುತ್ತಿದ್ದೇನೆ. ಸತ್ಯವಚನದ ಮಳೆಯಲ್ಲಿ ಮೀಯುವುದು ಎಷ್ಟು ಉಲ್ಲಾಸಕರವಾಗಿದೆ.

ದೇವರು ನಿಮ್ಮನ್ನು ಆಶೀರ್ವದಿಸಲಿ, ವಿಶ್ವ ಪ್ಯಾಸ್ಟರ್ ಅಲಾಮೊ, ಮತ್ತು ಈ ಅಭಿಪ್ರಾಯಗಳನ್ನು ಹೊಂದಿರುವವನು ಈ ಗ್ರಹದಲ್ಲಿ ನಾನೊಬ್ಬನೇ ಅಲ್ಲ ಎಂಬುದನ್ನು ರುಜುವಾತುಪಡಿಸಿದ್ದಕ್ಕಾಗಿ ನಿಮಗೆ ಧನ್ಯವಾದಗಳು.

ಹೃತ್ಪೂರ್ವಕವಾಗಿ,

ಡಾಮ್ ಕಾರ್ಪೆಂಟಿಯರಿ — ಫ್ಲೋರಲ್ ಪಾರ್ಕ್, ನ್ಯೂಯಾರ್ಕ್

## ಭಾರತ



*ಭಾರತದ ಆಂಧ್ರಪ್ರದೇಶದ ಹಳ್ಳಿಗಳಲ್ಲಿ ರೆವೆರೆಂಡ್ ಡಿ. ಆರ್. ಮೋಸಸ್ ರವರು ಪ್ಯಾಸ್ಟರ್ ಅಲಾಮೊ ಅವರ ಸುವಾರ್ತಾ ಸಾಹಿತ್ಯವನ್ನು ಹಂಚುತ್ತಿರುವುದು*

ನಮ್ಮ ಚರ್ಚಿನಲ್ಲಿ ಮತ್ತು ತೆಲುಗುವಿನಲ್ಲಿ ಅನುವಾದ ಪಡೆಯುವ ಬುಡಕಟ್ಟು ಜನರಲ್ಲಿ ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯ ವಿತರಣೆಯಿಂದ ನನಗೆ ಬಹಳ ಸಂತೋಷವಾಗಿದೆ. ಸಾಧ್ಯವಾದರೆ ಇನ್ನೂ ಹೆಚ್ಚಿನ ತೆಲುಗು ಸಾಹಿತ್ಯವನ್ನು ಕಳುಹಿಸಿರಿ, ಏಕೆಂದರೆ ನಾವೆಲ್ಲರೂ ಪ್ಯಾಸ್ಟರುಗಳು ಮತ್ತು ಯುವಕರು.

ಪ್ಯಾಸ್ಟರ್, ನಿಮಗೆ ಕೃತಜ್ಞತೆ ಸಲ್ಲಿಸುತ್ತ,

ಆತನ ಸೇವೆಯಲ್ಲಿ ನಿಮ್ಮವನಾದ

ರೆವರೆಂಡ್ ಡಿ.ಆರ್. ಮೋಸಸ್, ವಾಯ್ಸ್ ಆಫ್ ಸೈಯನ್ ಪ್ರೇಯರ್ ಹೌಸ್

ಆಂಧ್ರ ಪ್ರದೇಶ, ದಕ್ಷಿಣ ಭಾರತ

"ಆ ದಿನಗಳ ಸಂಕಟವು ತೀರಿದ ಕೂಡಲೆ ಸೂರ್ಯನು ಕತ್ತಲಾಗಿ ಹೋಗುವನು, ಚಂದ್ರನು ಬೆಳಕು ಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು. ಆಗ [ಅದಕ್ಕಿಂತ ಮೊದಲಲ್ಲ, ಆಗ - ಸಂಕಟದ ದಿನಗಳು ಮುಗಿದ ಕೂಡಲೆ] ಮನುಷ್ಯಕುಮಾರನನ್ನು ಸೂಚಿಸುವ ಚಿಹ್ನೆ ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಿದುಕೊಳ್ಳುವರು, ಮತ್ತು ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು. ಮತ್ತು ಆತನು ತುತೂರಿಯ ಮಹಾಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು" (ಮತ್ತಾಯ 24:28-31).

ಈಗ, ಮನುಷ್ಯನು ಕೇವಲ ರೊಟ್ಟಿ ತಿಂದು ಬದುಕುವುದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಪ್ರಭು ಸೈತಾನನಿಗೆ ಮಾತ್ರವಲ್ಲ, ನಮಗೂ ಹೇಳಿದರು (ಮತ್ತಾಯ 4:4). ಆದ್ದರಿಂದ, ಮತ್ತಾಯ ಅಧ್ಯಾಯ 24, ದಾನಿಯೇಲ ಅಧ್ಯಾಯ 7, ಮತ್ತು ಪ್ರಕಟನೆ ಪುಸ್ತಕಗಳ ಮಹಾ ಸಂಕಟದ ಭವಿಷ್ಯವಾಣಿಗಳು ನಮ್ಮನ್ನು ಹೆದರಿಸಲು ನಾವು ಅವಕಾಶ ಕೊಡಬಾರದು, ಬದಲಿಗೆ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತನ್ನು ಅನುಸರಿಸಿ ಬದುಕಬೇಕು, ಉದಾಹರಣೆಗೆ, ಕೀರ್ತನೆಗಳು 37: "ಕೆಟ್ಟ ನಡತೆಯುಳ್ಳವರನ್ನು ನೋಡಿ ಉರಿಗೊಳ್ಳಬೇಡ; ದುರಾಚಾರಿಗಳಿಗೋಸ್ಕರ ಹೊಟ್ಟೆಕಿಚ್ಚುಪಡಬೇಡ. ಅವರು ಹುಲ್ಲಿನಂತೆ ಬೇಗ ಒಣಗಿ ಹೋಗುವರು; ಸೊಪ್ಪಿನ ಪಲ್ಯದಂತೆ ಬಾಡಿಹೋಗುವರು. ಯೆಹೋವನಲ್ಲಿ ಭರವಸೆಯಿಟ್ಟು ಒಳ್ಳೆಯದನ್ನು ಮಾಡು; ನಂಬಿಕೆಯನ್ನು ಅನುಸರಿಸು ಆಗ ನೀನು ದೇಶದೊಳಗೆ ವಾಸಿಸುವಿ. ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು. ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು. ವಿಶ್ರಾಂತಿ ಪಡೆ ಮತ್ತು ಶಾಂತನಾಗಿ ಆತನಿಗೋಸ್ಕರ ಕಾದಿರು; ಕುಯುಕ್ತಿಗಳನ್ನು ನೆರವೇರಿಸಿಕೊಂಡು ಅಭಿವೃದ್ಧಿ ಹೊಂದುವವನನ್ನು ನೋಡಿ ಉರಿಗೊಳ್ಳಬೇಡ. ಕೋಪವನ್ನು ಅಣಗಿಸಿಕೋ; ರೋಷವನ್ನು ಬಿಡು. ಉರಿಗೊಳ್ಳಬೇಡ; ಕೆಡುಕಿಗೆ ಕಾರಣವಾದೀತು. ಕೆಡುಕು ಮಾಡುವವರು ತೆಗೆದುಹಾಕಲ್ಪಡುವರು; ಯೆಹೋವನನ್ನು ನಿರೀಕ್ಷಿಸುವವರೇ ದೇಶವನ್ನು ಅನುಭವಿಸುವರು.




"ಇನ್ನು ಸ್ವಲ್ಪ ಕಾಲದೊಳಗೆ ದುಷ್ಟನು ಕಾಣಿಸದೆ ಹೋಗುವನು; ಅವನಿದ್ದ ಸ್ಥಳದಲ್ಲಿ ಎಷ್ಟು ವಿಚಾರಿಸಿದರೂ ಅವನು ಸಿಕ್ಕುವದೇ ಇಲ್ಲ. ಆದರೆ ದೀನರು ದೇಶವನ್ನು ಅನುಭವಿಸುವರು; ಅವರು ಮಹಾ ಶಾಂತಿಯನ್ನು ಆನಂದಿಸುವರು. ದುಷ್ಟನು ನೀತಿವಂತನಿಗೆ ವಿರೋಧವಾಗಿ ಆಲೋಚಿಸುತ್ತಾನೆ; ಅವನನ್ನು ನೋಡಿ ಹಲ್ಲು ಕಡಿಯುತ್ತಾನೆ. ಆದರೆ ಕರ್ತನು ಅವನಿಗೆ ಶಿಕ್ಷಾಕಾಲ ಬರುತ್ತದೆಂದು ನಗುತ್ತಾನೆ. ದುಷ್ಟರು ಬಡವರನ್ನು ಹಾಗೂ ಏನೂ ಇಲ್ಲದವರನ್ನು ಕಡಿದು ಬಿಡಬೇಕೆಂದು ಕತ್ತಿಯನ್ನು ಹಿರಿದಿದ್ದಾರೆ; ಯಥಾರ್ಥರನ್ನು ಕೊಂದುಹಾಕಬೇಕೆಂದು ಬಿಲ್ಲನ್ನು ಎತ್ತಿದ್ದಾರೆ. ಆದರೆ ಅವರ ಕತ್ತಿ ಅವರ ಎದೆಯನ್ನೇ ಇರಿದು ಬಿಡುವದು; ಅವರ ಬಿಲ್ಲುಗಳು ಸಿಡಿದು ಮುರಿದು ಹೋಗುವವು.

"ದುಷ್ಟರ ಮಹಾಸಮೃದ್ಧಿಗಿಂತಲೂ ನೀತಿವಂತನ ಬಡತನವೇ ಲೇಸು. ದುಷ್ಟರ ತೋಳುಗಳು ಮುರಿದು ಹೋಗುವವು; ನೀತಿವಂತರನ್ನು ಯೆಹೋವನೇ ಉದ್ಧರಿಸುವನು. ಯೆಹೋವನು ಸದ್ಭಕ್ತರ ಜೀವಮಾನವನ್ನು ಲಕ್ಷಿಸುತ್ತಾನೆ; ಅವರ ಸೊತ್ತು ಶಾಶ್ವತವಾಗಿ ನಿಲ್ಲುವದು. ಅವರಿಗೆ ವಿಪತ್ಕಾಲದಲ್ಲಿಯೂ ಆಶಾಭಂಗವಾಗುವದಿಲ್ಲ; ಬರಗಾಲದಲ್ಲಿಯೂ ಅವರಿಗೆ ಕೊರತೆಯಿಲ್ಲ. ದುಷ್ಟರೋ ನಾಶವಾಗಿ ಹೋಗುವರು; ಯೆಹೋವನ ವೈರಿಗಳು ಕುರಿಗಳ ಕೊಬ್ಬಿನಂತಿದ್ದು ಮಾಯವಾಗುವರು. ಅವರು ಹಬೆಯಂತೆ ತೋರಿ ಅಡಗಿ ಹೋಗುವರು. ದುಷ್ಟನು ಸಾಲ ಮಾಡಿಕೊಂಡು ತೀರಿಸಲಾರದೆ ಹೋಗುವನು; ನೀತಿವಂತನು ಪರೋಪಕಾರಿಯಾಗಿ ಧರ್ಮ ಕೊಡುವನು. ಯೆಹೋವನ ಆಶೀರ್ವಾದವು ಯಾರಿಗಿರುವದೋ ಅವರು ಭೂಮಿಯನ್ನು ಅನುಭವಿಸುವರು; ಆತನ ಶಾಪವು ಯಾರಿಗಿರುವದೋ ಅವರು ತೆಗೆದುಹಾಕಲ್ಪಡುವರು.

"ಸತ್ಪುರುಷನ ಗತಿಸ್ಥಾಪನೆಯು ಯೆಹೋವನಿಂದಲೇ ಆಗಿದೆ, ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ. ಅವನು ಕೆಳಗೆ ಬಿದ್ದರೂ ಏಳದೇ ಹೋಗುವದಿಲ್ಲ; ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು. ನಾನು ಬಾಲಕನಾಗಿದ್ದೆನು, ಈಗ ವೃದ್ಧನಾಗಿದ್ದೇನೆ; ಈವರೆಗೂ ನೀತಿವಂತನು ದಿಕ್ಕಿಲ್ಲದೆ ಬಿದ್ದಿರುವದನ್ನಾಗಲಿ ಅವನ ಸಂತತಿಯವರು ಭಿಕ್ಷೆಬೇಡಿ ತಿನ್ನುವದನ್ನಾಗಲಿ ನೋಡಲಿಲ್ಲ. ಅವನು ಯಾವಾಗಲೂ ಧರ್ಮಿಷ್ಠನಾಗಿರುವನು ಮತ್ತು ಕೊಡುವವನಾಗಿರುವನು; ಅವನ ಸಂತತಿಯವರು ಆಶೀರ್ವಾದ ಹೊಂದುವರು. ಕೆಟ್ಟದ್ದಕ್ಕೆ ಹೋಗದೆ ಒಳ್ಳೆಯದನ್ನೇ ಮಾಡು; ಆಗ ನೀನು ಯಾವಾಗಲೂ ವಾಸವಾಗಿರುವಿ. ಯೆಹೋವನು ನ್ಯಾಯವನ್ನು ಮೆಚ್ಚುವವನು; ತನ್ನ ಭಕ್ತರನ್ನು ಎಂದಿಗೂ ಕೈಬಿಡುವವನಲ್ಲ. ಅವರು ಸದಾಕಾಲವೂ ಸುರಕ್ಷಿತರಾಗಿರುವರು ದುಷ್ಟರ ಸಂತತಿ ತೆಗೆದುಹಾಕಲ್ಪಡುವದು. ನೀತಿವಂತರೋ ಭೂಮಿಯನ್ನು ಅನುಭವಿಸುವವರಾಗಿ ಅದರಲ್ಲಿ ಶಾಶ್ವತವಾಗಿ ವಾಸಿಸುವರು. ನೀತಿವಂತನ ಬಾಯಿಯು ಸುಜ್ಞಾನವನ್ನು ನುಡಿಯುತ್ತದೆ; ಅವನ ನಾಲಿಗೆ ನ್ಯಾಯವನ್ನೇ ಹೇಳುತ್ತದೆ. ದೇವರ ಶಾಸನ ಅವನ ಹೃದಯದಲ್ಲಿರುವದು; ಅವನು ಜಾರುವದೇ ಇಲ್ಲ. ದುಷ್ಟನು ಹೊಂಚುಹಾಕಿ ನೀತಿವಂತನನ್ನು ಕೊಲ್ಲಬೇಕೆಂದು ಸಮಯ ನೋಡುತ್ತಾನೆ. ಆದರೆ ಯೆಹೋವನು ನೀತಿವಂತನನ್ನು ಎಂದೂ ಅವನ ಕೈಗಳಲ್ಲಿ ಬಿಡುವುದಿಲ್ಲ. ಅವನನ್ನು ನ್ಯಾಯವಿಚಾರಣೆಯಲ್ಲಿ ಅಪರಾಧಿ ಎಂದು ಎಣಿಸುವದಿಲ್ಲ.

"ಯೆಹೋವನನ್ನು ನಿರೀಕ್ಷಿಸುವವನಾಗಿ ಆತನ ಮಾರ್ಗವನ್ನೇ ಅನುಸರಿಸು; ಆಗ ಆತನು ನಿನ್ನನ್ನು ಮುಂದಕ್ಕೆ ತಂದು ದೇಶವನ್ನು ಅನುಭವಿಸುವಂತೆ ಮಾಡುವನು; ದುಷ್ಟರು ತೆಗೆದುಹಾಕಲ್ಪಡುವದನ್ನು ನೀನು ನೋಡುವಿ. ದುಷ್ಟನು ಭೀಕರನಾಗಿ ಸ್ವಸ್ಥಳದಲ್ಲಿ ಹಸುರಾಗಿ ಬೆಳೆದ ಮರದಂತೆ ವಿಸ್ತರಿಸಿಕೊಂಡಿರುವದನ್ನು ನೋಡಿದ್ದೆನು. ತರುವಾಯ ನಾನು ಆ ದಾರಿಯಲ್ಲಿ ಹೋಗಿ ನೋಡಲಾಗಿ ಅವನು ಇಲ್ಲದೆ ಹೋಗಿದ್ದನು; ಅವನನ್ನು ಹುಡುಕಿದರೂ ಸಿಕ್ಕಲೇ ಇಲ್ಲ. ಒಳ್ಳೇ ನಡತೆಯುಳ್ಳವನನ್ನು ನೋಡು, ಯಥಾರ್ಥನನ್ನು ಲಕ್ಷಿಸು; ಆ ಮನುಷ್ಯನ ಅಂತ್ಯವು ಶಾಂತಿಯುತವಾಗಿರುತ್ತದೆ. ದ್ರೋಹಿಗಳೆಲ್ಲರೂ ನಾಶವಾಗುವರು; ದುಷ್ಟರ ಅಂತ್ಯವು ಕತ್ತರಿಸಿಹಾಕಲ್ಪಡುವದು. ನೀತಿವಂತರ ರಕ್ಷಣೆ ಯೆಹೋವನಿಂದಲೇ; ಇಕ್ಕಟ್ಟಿನಲ್ಲಿ ಆತನೇ ಅವರಿಗೆ ದುರ್ಗಸ್ಥಾನ. ಯೆಹೋವನು ಸಹಾಯಕನಾಗಿ ಅವರನ್ನು ತಪ್ಪಿಸಿಬಿಡುವನು; ಅವರು ಆತನ ಆಶ್ರಿತರಾದ್ದರಿಂದ ದುಷ್ಟರ ಕೈಯಿಂದ ತಪ್ಪಿಸಿ ರಕ್ಷಿಸುವನು" (ಕೀರ್ತನೆಗಳು ಅಧ್ಯಾಯ 37).

"ಅವರು ಹೇಳುವಂತೆ ಸೈತಾನನ ಆಳವನ್ನು" ತಿಳಿದುಕೊಳ್ಳುವುದರ ಅರ್ಥ ಮೃಗ (ವಿಶ್ವ ಸರ್ಕಾರ) ಮತ್ತು ಮೃಗದ ಗುರುತು (ಪ್ರಕಟನೆ 2:24). ಬೇಕೆಂದೇ ಪಾಪ ಮಾಡುವವರು ಪರಲೋಕವನ್ನು ಪ್ರವೇಶಿಸಲು ಸಾಧ್ಯವಿಲ್ಲ.[11] ಯಾವುದೇ ಕಾರಣಕ್ಕಾಗಿ ಮೃಗದ ಗುರುತನ್ನು ತೆಗೆದುಕೊಳ್ಳುವ ಯಾರೇ ಆಗಲಿ, ಪರಲೋಕವನ್ನು ಪ್ರವೇಶಿಸಲು ಸಾಧ್ಯವಿಲ್ಲ (ಪ್ರಕಟನೆ 14:9-11). ದೇವರ ಪದವನ್ನು ಓದಿ ಅಧ್ಯ-

*(ಪುಟ 4ರಲ್ಲಿ ಮುಂದುವರಿದಿದೆ)*

**11** ಮತ್ತಾಯ 12:31-32, ಯೋಹಾನ 5:14, 8:11, ಇಬ್ರಿಯರಿಗೆ 6:4-8, 10:26-31, 2 ಪೇತ್ರನು 2:20-22, ಯೂದನು 5-6

## ಮೃಗದ ಗುರುತನ್ನು ಎಂದೂ ತೆಗೆದುಕೊಳ್ಳಬೇಡಿ ಇಲ್ಲವಾದರೆ ನೀವು ಶಾಶ್ವತವಾಗಿ ಪಶ್ಚಾತ್ತಾಪ ಪಡುವಿರಿ

*(ಪುಟ 3 ರಿಂದ ಮುಂದುವರಿದಿದೆ)*

ಯನ ಮಾಡಿ.[12] ಮನುಷ್ಯರೆಲ್ಲರ ಕರ್ತವ್ಯವೇನೆಂದರೆ “ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಪಾಲಿಸುವುದು” (ಪ್ರಸಂಗಿ 12:13).

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[13] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[14] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[15] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[16] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[17] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[18] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[19] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[20] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[21] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[22] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಇನ್ನು ಮುಂದೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[23]**

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರೆಂದು ಹೇಳಲಾಗುತ್ತದೆ.[24] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಸಾಯುವ ತನಕ ಅದು ಹೇಳಿದ್ದನ್ನು ಮಾಡಿ.[25]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ (ಮಾರ್ಕ 16:15). ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಂಪಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗ್ ಗಾಗಿ ಅನೇಕ ಮಿಲಿಯ ಡಾಲರುಗಳನ್ನು ವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, “ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವಾದರೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನನ್ನಿಂದ ಏನು ಕದ್ದುಕೊಂಡಿದ್ದೀರಿ ಎಂದು ಕೇಳುತ್ತೀರೋ? ದಶಾಂಶ ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದಂತಾಗುವುದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ” (ಮಲಾಕಿಯ 3:8-12).

**12** ರೋಮಾಪುರದವರಿಗೆ 15:4, 2 ತಿಮೊಥೆಯನಿಗೆ 2:15, 3:14-17 **13** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **14** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **15** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **16** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **17** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **18** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **19** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **20** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **21** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **22** ಇಬ್ರಿಯರಿಗೆ 11:6 **23** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **24** ಮತ್ತಾಯ 28:18-20, ಯೋಹಾನ 3:5, ಅಪೋಸ್ತಲರ ಕೃತ್ಯಗಳು 2:38, 19:3-5 **25** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**
**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**
**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್ ವೈಡ್ ಸ್ಥಳ ಒದಗಿಸುತ್ತದೆ.

ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.

**333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.**

*ಲಾಸ್ ಏಂಜಲೀಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ ವ್ಯವಸ್ಥೆ ಮಾಡಲಾಗುವುದು.*

**ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).**

**ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.**

**ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.**

**ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:**

© Copyright June 2012, 2015 All rights reserved World Pastor Tony Alamo ® Registered June 2012, 2015

KANNADA—VOLUME 16100—*NEVER TAKE THE MARK OF THE BEAST OR YOU WILL BE ETERNALLY SORRY*